KASM620025032025

## ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಧಿಕಾರಿಗಳು ಸಾಗರ.

**: ಉಪಸ್ಥಿತರು :**

**ಶ್ರೀ ಮಾದೇಶ ಎಂ.ವಿ., ಬಿ.ಕಾಂ., ಎಲ್.ಎಲ್.ಬಿ.,**

ಪ್ರಧಾನ ಸಿವಿಲ್ ನ್ಯಾಯಾಧೀಶರು

ಮತ್ತು ಜೆ.ಎಂ.ಎಫ್.ಸಿ., ಸಾಗರ.

**ಅಸಲು ದಾವಾ ಸಂಖ್ಯೆ 241/2025**

**ದಿನಾಂಕಃ 19 ನೇ ಡಿಸೆಂಬರ್ 2025**

**ವಾದಿ** : ಗಂಗಾಧರ ಬಿ.ಸಿ. ತಂದೆಃ ಬಿ. ಚಂದ್ರಶೇಖರ ಗೌಡ
ವಯಸ್ಸು 71 ವರ್ಷ, ವ್ಯವಸಾಯಗಾರರು
ವಾಸಃ ಬಡಗೋಡು ಗ್ರಾಮ, ಆವಿನಹಳ್ಳಿ ಹೋಬಳಿ
ಸಾಗರ ತಾಲ್ಲೂಕು, ಶಿವಮೊಗ್ಗ ಜಿಲ್ಲೆ.

**ವಿರುದ್ಧ**

**ಪ್ರತಿವಾದಿಯರು:**

1. ವಿನಾಯಕ ಬಿ.ಜಿ. ತಂದೆಃ ಗಂಗಾಧರ ಬಿ.ಸಿ.
   ವಯಸ್ಸು 38 ವರ್ಷ,

2. ಅಶ್ವಿನಿ ಕೆ.ಜಿ. ಕೋಂಃ ವಿನಾಯಕ ಬಿ.ಜಿ.

ಇಬ್ಬರ ವಾಸಃ ಎಲ್‌ಐಜಿ–55
ಹುಡ್ಕೋ ಕರಿಯಣ್ಣ ಮನೆ ಎದುರು,
2 ನೇ ಹಂತ, ವಿನೋಬನಗರ, ಶಿವಮೊಗ್ಗ ಸಿಟಿ,
ಶಿವಮೊಗ್ಗ ಜಿಲ್ಲೆ.

**ಮಧ್ಯಂತರ ಅರ್ಜಿ 1ರ ಪಕ್ಷಗಾರರು**

**ಅರ್ಜಿದಾರರು** : ಗಂಗಾಧರ ಬಿ.ಸಿ. ತಂದೆಃ ಬಿ. ಚಂದ್ರಶೇಖರ ಗೌಡ

**ವಿರುದ್ಧ**

**ಎದುರುದಾರರು** : ವಿನಾಯಕ ಬಿ.ಜಿ. ತಂದೆಃ ಗಂಗಾಧರ ಬಿ.ಸಿ. ಮತ್ತು ಇನ್ನೊಬ್ಬರು

**(ವಾದಿ ಪರವಾಗಿ ಶ್ರೀ ಎಸ್.ಕೆ. ವಕೀಲರು)**
**(ಪ್ರತಿವಾದಿಯರ ಪರವಾಗಿ ಶ್ರೀ ಎಂ.ಎಸ್.ಜಿ. ವಕೀಲರು)**

| | |
|---|---|
| Provision Under which the application is filed | 39 Rule 1 and 2 and r/w Sec.151 of CPC |
| Relief sought for | Temporary injunction order against the defendant restraining them from illegally entering to the suit property and causing |

| | |
|---|---|
| | nuisance and harassing the plaintiff or his wife in any manner till disposal of the suit. |
| The date on which the application is filed | 29-10-2025 |
| Number of the application | IA No.1 |
| The date on which the objection is filed by different opponents | 28-11-2025 |
| The date on which the orders were passed on the said application. | 19-12-2025 |

**ಸಿವಿಲ್ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 39 ನಿಯಮ 1 ಮತ್ತು 2 ಸಹವಾಚಕ 151 ರ ಅಡಿಯಲ್ಲಿ ವಾದಿಯು ಸಲ್ಲಿಸಿದ ಮಧ್ಯಂತರ ಅರ್ಜಿ ಸಂಖ್ಯೆ 1 ರ ಮೇಲಿನ ಆದೇಶ**

1. ವಾದಿಯು ಪ್ರಸ್ತುತ ದಾವೆಯನ್ನು ಪ್ರತಿವಾದಿಯರ ವಿರುದ್ಧ ಶಾಶ್ವತ ಪ್ರತಿಬಂಧಕಾಜ್ಞೆ ಪರಿಹಾರಕ್ಕಾಗಿ ಸಲ್ಲಿಸಿರುತ್ತಾರೆ. ಸದರಿ ದಾವೆಯಲ್ಲಿ

ವಾದಿಯು ಮಧ್ಯಂತರ ಅರ್ಜಿ ಸಂಖ್ಯೆ1 ನ್ನು ಸಲ್ಲಿಸಿ, ಈ ದಾವೆಯು ಅಂತಿಮವಾಗಿ ನಿರ್ಣಯವಾಗುವವರೆಗೆ ಪ್ರತಿವಾದಿಯರಾಗಲೀ ಅಥವಾ ಅವರ ಪರವಾಗಿ ಕಾರ್ಯ ನಿರ್ವಹಿಸುವ ಇತರೇ ಎಲ್ಲಾ ವ್ಯಕ್ತಿಗಳನ್ನು ದಾವಾ ಸ್ವತ್ತಿಗೆ ಪ್ರವೇಶಿಸಿದಂತೆ ಮತ್ತು ಸದರಿ ಸ್ವತ್ತಿನಲ್ಲಿನ ವಾಸವಾಗಿರುವ ವಾದಿ ಮತ್ತು ಅವರನ ಪತ್ನಿಗೆ ಯಾವುದೇ ರೀತಿಯಲ್ಲಿ ಉಪದ್ರವ ನೀಡದಂತೆ, ತಾತ್ಕಾಲಿಕವಾಗಿ ಪ್ರತಿಬಂಧಿಸಬೇಕಾಗಿ ಕೋರಿರುತ್ತಾರೆ.

## ಶೆಡ್ಯೂಲ್

ಎ. ಶಿವಮೊಗ್ಗ ಜಿಲ್ಲೆ, ಸಾಗರ ತಾಲ್ಲೂಕು, ಆವಿನಹಳ್ಳಿ ಹೋಬಳಿ, ಆವಿನಹಳ್ಳಿ ಗ್ರಾಮ ಪಂಚಾಯ್ತಿ ಸ್ವತ್ತಿನ ಸಂಖ್ಯೆ 152400301000100750, ಸ್ವತ್ತಿನ ಸಂಖ್ಯೆ-336, ಪೂರ್ವ-ಪಶ್ಚಿಮ 70 X ಉತ್ತರ-ದಕ್ಷಿಣ 200 ಅಡಿ ಯಲ್ಲಿ 22 X 33 ಅಡಿ ವಿಸ್ತೀರ್ಣದಲ್ಲಿ ಕಟ್ಟಿದ ಆರ್.ಸಿ.ಸಿ. ಮನೆ ಇದಕ್ಕೆ ಚೆಕ್ಕು ಬಂಧಿಃ

**ಪೂರ್ವಕ್ಕೆ :** **ಪಾಟೀಲ ನಂಜುಂಡಪ್ಪ ರವರ ಸ್ವತ್ತು**
**ಪಶ್ಚಿಮಕ್ಕೆ :** **ಶಶಿಧರ ಮತ್ತು ಇತರರ ಸ್ವತ್ತು**

**ಉತ್ತರಕ್ಕೆ :** **ಸರ್ವೆ ನಂ.150**
**ದಕ್ಷಿಣಕ್ಕೆ :** **ಪಿ.ಡಬ್ಲೂ.ಡಿ. ರಸ್ತೆ**

2. ವಾದಿಯು ತನ್ನ ಮಧ್ಯಂತರ ಅರ್ಜಿ ಸಂಖ್ಯೆ 1 ರೊಂದಿಗೆ ತನ್ನ ಪ್ರಮಾಣ ಪತ್ರವನ್ನು ಸಲ್ಲಿಸಿರುತ್ತಾರೆ. ಸದರಿ ಪ್ರಮಾಣ ಪತ್ರದಲ್ಲಿ ವಾದಿಯು ಹೇಳುವುದೇನೆಂದರೆ, ತಾನು ಕೃಷಿಕನಾಗಿದ್ದು, ದಾವಾ ಸ್ವತ್ತಿನಲ್ಲಿನ ಮನೆಯಲ್ಲಿ ತನ್ನ ಪತ್ನಿಯೊಂದಿಗೆ ವಾಸವಾಗಿರುತ್ತಾರೆ. ಸದರಿ ವಾದಿಗೆ 1 ನೇ ಪ್ರತಿವಾದಿಯು ಮಗನಾಗಿದ್ದು, 2 ನೇ ಪ್ರತಿವಾದಿಯು 1 ನೇ ಪ್ರತಿವಾದಿಯ ಪತ್ನಿ ಅಂದರೆ ವಾದಿಯ ಸೊಸೆಯಾಗಿರುತ್ತಾಳೆ. ಸದರಿಯವರ ವಿವಾಹವನ್ನು 2019 ನೇ ಸಾಲಿನಲ್ಲಿ ವಾದಿಯೇ ಮಾಡಿರುತ್ತಾರೆ. ವಿವಾಹವಾದ ನಂತರ ಪ್ರತಿವಾದಿಯರು ವಾದಿಯೊಂದಿಗೆ ಕೆಲವು ದಿನಗಳವರೆಗೆ ಇದ್ದು, ನಂತರ 1 ನೇ ಪ್ರತಿವಾದಿಯು ಖಾಸಗಿ ಕಂಪನನಿಯಲ್ಲಿ ದುಡಿಮೆ ಮಾಡಲು 2 ನೇ ಪ್ರತಿವಾದಿಯೊಂದಿಗೆ ಬೆಳಗಾವಿಗೆ ಹೋಗಿ ನೆಲೆಸಿದ್ದರು. ಆನಂತರ ಶಿವಮೊಗ್ಗಕ್ಕೆ ವರ್ಗಾವಣೆಗೊಂಡು, ಅಲ್ಲಿ 2 ನೇ ಪ್ರತಿವಾದಿಯೊಂದಿಗೆ 1 ನೇ ಪ್ರತಿವಾದಿಯು ದಾಂಪತ್ಯ ಜೀವನ ನಡೆಸುತ್ತಿದ್ದರು. ಈ ಪ್ರತಿವಾದಿಯರು ವಾದಿಯ ಮೇಲೆ ಯಾವುದೇ ರೀತಿಯಲ್ಲಿ ಅವಲಂಬಿಸಿರುವುದಿಲ್ಲ ಮತ್ತು ವಾದಿ ಕುಟುಂಬದ ಸ್ವತ್ತುಗಳ ಕೃಷಿ ಚಟುವಟಿಕೆಗಳಿಗೆ ಸಹಕಾರವನ್ನು ನೀಡಿರುವುದಿಲ್ಲ. ಸದರಿ

ಪ್ರತಿವಾದಿಯರ ಕೋರಿಕೆಯಂತೆ ಅವರನ್ನು ಪ್ರತ್ಯೇಕವಾಗಿ ವಾಸಿಸಲು ಅವರಿಗೆ ಅನುಮತಿಯನ್ನು ನೀಡಿರುತ್ತಾರೆ. ಪ್ರತಿವಾದಿಯರು ಉದ್ಯೋಗ ಮಾಡುತ್ತಿದ್ದು, ಅವರ ಸ್ವಂತ ದುಡಿಮೆಯಿಂದ ಜೀವನ ನಡೆಸುತ್ತಿದ್ದಾರೆ.

3. ವಿವಾಹದ ನಂತರ ಕೆಲವೇ ತಿಂಗಳುಗಳಲ್ಲಿ ಪ್ರತಿವಾದಿಯರು ವಾದಿಯಿಂದ ಪ್ರತ್ಯೇಕವಾಗಿ ವಾಸವಾಗಿರುತ್ತಾರೆ. ಸದರಿ ವಾದಿಯೊಂದಿಗೆ ಪ್ರತಿವಾದಿಯರು ವಾಸಿಸುವ ಸಂದರ್ಭದಲ್ಲಿ ಅವರು ದುಡಿಮೆಯಿಂದ ಗಳಿಸಿದ ಎಲ್ಲಾ ಹಣವನ್ನು ತಮ್ಮ ಭವಿಷ್ಯಕ್ಕೆ ಉಳಿತಾಯ ಮಾಡದೇ ಖರ್ಚು ಮಾಡುತ್ತಾ ಬಂದಿರುತ್ತಾರೆ. ಈ ಕುರಿತು ಅವರಿಗೆ ತಿಳುವಳಿಕೆ ಹೇಳಿ ಭವಿಷ್ಯಕ್ಕೆ ಸ್ವಲ್ಪ ಹಣವನ್ನು ಉಳಿತಾಯ ಮಾಡುವಂತೆ ಹೇಳಿದರೂ ಸಹ ಯಾವುದೇ ಪ್ರಯೋಜನವಾಗಿರುವುದಿಲ್ಲ. ವಾದಿಯು ದಾವಾ ಸ್ವತ್ತಿನಲ್ಲಿನ ಮನೆಯನ್ನು ತನ್ನ ಪತ್ನಿಯೊಂದಿಗೆ ವಾಸವಾಗಿದ್ದು, ಆವಿನಹಳ್ಳಿ ಗ್ರಾಮ ಪಂಚಾಯ್ತಿಗೆ ದಾವಾ ಸ್ವತ್ತಿನ ಎಲ್ಲಾ ಕಂದಾಯ ವಗೈರೆಗಳನ್ನು ಪಾವತಿ ಮಾಡುತ್ತಿದ್ದು, ಸದರಿ ದಾವಾ ಸ್ವತ್ತಿನಲ್ಲಿನ ಮನೆಯು ಈಗ ತನ್ನ ಹೆಸರಿನಲ್ಲಿ ಇರುತ್ತದೆ.

4. ಸದರಿ ದಾವಾ ಸ್ವತ್ತು ವಾದಿಗೆ ದಿನಾಂಕ 28-03-2003 ರ ವಿಭಾಗ ಪತ್ರದ ಮೂಲಕ ಬಂದಿದ್ದು, ಅದರಂತೆ ದಾವಾ ಸ್ವತ್ತು ಹಾಗೂ ಇತರೇ ಕೃಷಿ ಜಮೀನುಗಳು ವಾದಿಯ ಹೆಸರಿಗೆ ಹಕ್ಕು ಬದಲಾವಣೆಯಾಗಿರುತ್ತದೆ. ಪ್ರತಿವಾದಿಯರು ವಾದಿಯ ಇಚ್ಚೆಗೆ ವಿರುದ್ದವಾಗಿ ವರ್ತಿಸಿದ್ದು, ವಾದಿ ಮತ್ತು ಅವನ ಪತ್ನಿಯ ಬಗ್ಗೆ ಕಿಂಚಿತ್ತೂ ಗೌರವ ಹೊಂದಿರುವುದಿಲ್ಲ. ಪ್ರತಿವಾದಿಯರು ವಾದಿಯ ಎಲ್ಲಾ ಉಳಿತಾಯದ ಹಣವನ್ನು ಹಾಗೂ ಕೃಷಿ ಜಮೀನುಗಳನ್ನು ತಮ್ಮ ಹೆಸರಿಗೆ ವರ್ಗಾವಣೆ ಮಾಡುವಂತೆ ಒತ್ತಾಯ ಮಾಡುತ್ತಿದ್ದು, ಸದರಿ ಕೋರಿಕೆಯನ್ನು ವಾದಿಯ ತಿರಸ್ಕರಿಸಿರುತ್ತಾರೆ. ಅಲ್ಲದೇ ದಾವಾ ಸ್ವತ್ತಿನಲ್ಲಿನ ತಮ್ಮ ಹಕ್ಕನ್ನು ಕಾನೂನುಬದ್ದವಾಗಿ ಪಡೆದುಕೊಳ್ಳುವಂತೆ ವಾದಿಯು ಸೂಚಿಸಿರುತ್ತಾರೆ. ಆ ಸಂದರ್ಭದಲ್ಲಿ ಪ್ರತಿವಾದಿಯರು ವಾದಿಯ ಮಗಳಿಗೆ ದಾವಾ ಸ್ವತ್ತಿನಲ್ಲಿ ಹಾಗೂ ಇತರೆ ಕುಟುಂಬದ ಆಸ್ತಿಗಳಲ್ಲಿ ಯಾವುದೇ ಹಿಸ್ಸೆಯನ್ನು ನೀಡಲು ತಾವು ಇಚ್ಚೆಯನ್ನು ಹೊಂದಿಲ್ಲ ಎಂಬುದಾಗಿ ತಿಳಿಸಿರುತ್ತಾರೆ. ದಿನಾಂಕ 27-10-2025 ಪ್ರತಿವಾದಿಯರು ದಾವಾ ಮನೆಗೆ ಬಂದು ಸದರಿ ವಾದಿಯ ಎಲ್ಲಾ ಸ್ವತ್ತುಗಳನ್ನು ಪ್ರತಿವಾದಿಯರ ಹೆಸರಿಗೆ ವರ್ಗಾವಣೆ ಮಾಡದೇ ಇದ್ದಲ್ಲಿ, ತಾವುಗಳು ಬಂದು ದಾವಾ ಮನೆಯಲ್ಲಿ

ವಾಸಿಸುವುದಾಗಿ ಬೆದರಿಕೆಯನ್ನು ಉಂಟುಮಾಡಿರುತ್ತಾರೆ. ಈ ಪ್ರತಿವಾದಿಯರು ದಾವಾ ಮನೆಯಲ್ಲಿ ಕೂಗಾಡಲು ಮತ್ತು ಕಿರುಚಾಡಲು ಪ್ರಾರಂಭಿಸಿದಾಗ, ಅನಾರೋಗ್ಯದ ವಾತಾವರಣವನ್ನು ಸೃಷಿಮಾಡಬೇಡಿ ಎಂದು ಹಾಗೂ ಸದರಿ ಕ್ರಮವು ತನ್ನ ಆರೋಗ್ಯದ ಮೇಲೆ ಪರಿಣಾಮ ಬೀರುತ್ತದೆ ಎಂದು ಪ್ರತಿವಾದಿಯರನ್ನು ವಿನಂತಿಸಿರುತ್ತಾರೆ. ಸದರಿ ಪ್ರತಿವಾದಿಯರ ಕಾನೂನು ಬಾಹಿರ ಕೃತ್ಯವನ್ನು ನೆರೆಹೊರೆಯವರ ಮಧ್ಯ ಪ್ರವೇಶಿಸಿಸುವಿಕೆಯಿಂದ ಪ್ರತಿವಾದಿಯರನ್ನು ಮನೆಯಿಂದ ಹೊರಗೆ ಕಳುಹಿಸಿರುತ್ತಾರೆ. ಈ ವಾದಿಯು ವಯೋವೃದ್ಧರಾಗಿದ್ದು, ವಯೋಸಹಜ ಕಾಯಿಲೆಗಳಿಂದ ಬಳಲುತ್ತಿದ್ದಾರೆ. ಈ ವಾದಿಯು ತನ್ನ ಪತ್ನಿಯೊಂದಿಗೆ ಶಾಂತಿಯುತವಾಗಿ ಜೀವಿಸಲು ಆರೋಗ್ಯಕರ ವಾತಾವರಣದ ಅಗತ್ಯವಿರುತ್ತದೆ. ಈ ಪ್ರತಿವಾದಿಯರು ಕಿರುಕುಳದಿಂದ ತನ್ನ ಆರೋಗ್ಯದ ಸ್ಥಿತಿ ಹದೆಗೆಡುವ ಎಲ್ಲಾ ಸಾಧ್ಯತೆಗಳು ಇರುತ್ತದೆ. ಪ್ರತಿವಾದಿಯರ ಕಾನೂನು ಬಾಹಿರ ಕೃತ್ಯಗಳನ್ನು ನ್ಯಾಯಾಲಯದ ಹಸ್ತಕ್ಷೇಪವಿಲ್ಲದೇ ತಡೆಯುವುದು ಅಸಾಧ್ಯವಾಗಿರುತ್ತದೆ. ವಾದಿಯ ಪರವಾಗಿ ಮೇಲ್ನೋಟದ ದಾವೆ ಇದ್ದು, ಸದರಿ ದಾವಾ ಸ್ವತ್ತಿನಲ್ಲಿ ವಾದಿಯು ಶಾಂತಿಯುತ ಸ್ವಾಧಿನಾನುಭವದಲ್ಲಿ ಮಾಲೀಕನಾಗಿ

ಇರುತ್ತಾರೆ. ಸದರಿ ವಾದಿಯ ಪರವಾಗಿ ಅನುಕೂಲತೆಯ ಒಲವು ಹಾಗೂ ಮೇಲ್ನೋಟದ ದಾವೆಯಿದ್ದು, ಒಂದು ವೇಳೆ ಮಧ್ಯಂತರ ಅರ್ಜಿಯನ್ನು ಪುರಸ್ಕರಿಸದೇ ಹೋದಲ್ಲಿ, ವಾದಿಗೆ ತುಂಬಲಾರದ ನಷ್ಟ ಮತ್ತು ಹಾನಿ ಉಂಟಾಗುತ್ತದೆ. ಅದೇ ರೀತಿಯಾಗಿ ಸದರಿ ಅರ್ಜಿಯನ್ನು ಪರಸ್ಕರಿಸಿದರೆ ಪ್ರತಿವಾದಿಯರಿಗೆ ಯಾವುದೇ ರೀತಿ ತೊಂದರೆ ಉಂಟಾಗುವುದಿಲ್ಲ. ಆದ್ದರಿಂದ, ಸದರಿ ಮಧ್ಯಂತರ ಅರ್ಜಿಯನ್ನು ಪುರಸ್ಕರಿಸಬೇಕೆಂದು ವಾದಿಯು ತಮ್ಮ ಪ್ರಮಾಣಪತ್ರದಲ್ಲಿ ಕೋರಿರುತ್ತಾರೆ.

5. 1 ನೇ ಪ್ರತಿವಾದಿಗೆ ಸಮನ್ಸ್ ಜಾರಿಯಾಗಿದ್ದು, ಸಾಕಷ್ಟು ಕಾಲಾವಕಾಶವನ್ನು ನೀಡಿದ್ದರೂ ಸಹ ಅವರು ಯಾವುದೇ ತಕರಾರನ್ನು ಸಲ್ಲಿಸಿರವುದಿಲ್ಲ. 2 ನೇ ಪ್ರತಿವಾದಿಯು ತನ್ನ ವಿವರವಾದ ಪ್ರತಿವಾದ ಪತ್ರವನ್ನು ಸಲ್ಲಿಸಿದ್ದು, ಸದರಿ ಪ್ರತಿವಾದ ಪತ್ರವನ್ನು ಮಧ್ಯಂತರ ಅರ್ಜಿ ಸಂಖ್ಯೆ 1 ಕ್ಕೆ ತಮ್ಮ ತಕರಾರು ಎಂಬುದಾಗಿ ಪರಿಗಣಿಸಲು ಕೋರಿದ್ದಲ್ಲದೇ, ಪ್ರತ್ಯೇಕ ತಕರಾರನ್ನು ಮಧ್ಯಂತರ ಅರ್ಜಿ ಸಂಖ್ಯೆ–1 ಕ್ಕೆ ಸಲ್ಲಿಸಿರುತ್ತಾರೆ. ಸದರಿ ತಕರಾರಿನಲ್ಲಿ 2 ನೇ ಪ್ರತಿವಾದಿಯು ಹೇಳುವುದೇನೆಂದರೆ, ತನ್ನ ಮತ್ತು ವಾದಿ ಹಾಗೂ 1 ನೇ ಪ್ರತಿವಾದಿಯರ ನಡುವಿನ ಸಂಬಂಧವನ್ನು

ಒಪ್ಪಿಕೊಂಡಿರುತ್ತಾರೆ. ಅಲ್ಲದೇ ದಾವಾ ಮನೆಯಲ್ಲಿ ವಾದಿಯು ವಾಸವಾಗಿದ್ದು, ಸದರಿ ಮನೆಯಲ್ಲಿ ತಾನು ಸಹ ಪ್ರಸ್ತುತ ವಾಸವಾಗಿರುವುದಾಗಿ ಹೇಳಿದ್ದಾರೆ. ಅಲ್ಲದೇ ಪ್ರತಿವಾದಿಯರ ವಿವಾಹವಾದ ನಂತರ ದಾವಾ ಸ್ವತ್ತಿನಲ್ಲಿ ವಾದಿಯೊಂದಿಗೆ ಕೆಲವು ತಿಂಗಳುಗಳ ಕಾಲ ವಾಸವಾಗಿದ್ದು, ನಂತರ ಬೆಳಗಾವಿಯಲ್ಲಿ ಮನೆಮಾಡಿಕೊಂಡು 2021 ರ ವರೆಗೂ ವಾಸವಾಗಿದ್ದು, ನಂತರ 1 ನೇ ಪ್ರತಿವಾದಿಯು ಶಿವಮೊಗ್ಗಕ್ಕೆ ವರ್ಗಾವಣೆಯಾಗಿದ್ದರಿಂದ ಅವನೊಂದಿಗೆ 2 ನೇ ಪ್ರತಿವಾದಿಯು ಸಹ ಶಿವಮೊಗ್ಗದಲ್ಲಿ ಬಂದು ಉಳಿದುಕೊಂಡಿದ್ದಳು. ಪ್ರತಿವಾದಿಯರು ಶಿವಮೊಗ್ಗದಲ್ಲಿ ಉಳಿದುಕೊಂಡ ಲಗಾಯ್ತಿನಿಂದ ವಾದಿ ಮತ್ತು ಇವರ ಮಗಳ ಚಿತಾವಣೆಯಿಂದ 1 ನೇ ಪ್ರತಿವಾದಿ, 2 ನೇ ಪ್ರತಿವಾದಿಗೆ ಚಿತ್ರವಿಚಿತ್ರ ರೀತಿಯಲ್ಲಿ ಹಿಂಸೆ ನೀಡಲು ಪ್ರಾರಂಭಿಸಿದ್ದು, ದುರ್ದೈವಕ್ಕೆ 2 ನೇ ಪ್ರತಿವಾದಿಗೆ ಮಕ್ಕಳು ಜನಿಸಿರುವುದಿಲ್ಲ ಹಾಗೂ ಗರ್ಭದಾರಣೆಗಾಗಿ 2 ನೇ ಪ್ರತಿವಾದಿಯು ಚಿಕಿತ್ಸೆ ಪಡೆಯುತ್ತಿದ್ದು, ಈವರೆಗೂ ಚಿಕಿತ್ಸೆ ಫಲ ಕಾರಿಯಾಗಿರುವುದಿಲ್ಲ. 1 ನೇ ಪ್ರತಿವಾದಿಯು, 2 ನೇ ಪ್ರತಿವಾದಿಯನ್ನು ದೂರವಿಡಬೇಕು ಎನ್ನುವ ಉದ್ದೇಶದಿಂದ, ದಿನಾಂಕ 16-11-2024 ರಂದು 1 ನೇ

ಪ್ರತಿವಾದಿಯು ಶಿವಮೊಗ್ಗದ ಬಾಡಿಗೆ ಮನೆ ಖಾಲಿ ಮಾಡಿ, ಗೊತ್ತಿಲ್ಲದ ವಿಳಾಸಕ್ಕೆ ಹೋಗಿ ಉಳಿದುಕೊಂಡಿರುತ್ತಾರೆ. ದಿನಾಂಕ 18-11-2024 ರಂದು ಈ ಪ್ರತಿವಾದಿಯು ದಾವಾ ಮನೆಗೆ ಬಂದು ಉಳಿದುಕೊಂಡಿರುತ್ತಾಳೆ.

6. ವಾದಿ ಮತ್ತು ವಾದಿಯ ಹೆಂಡತಿ ಈ ಪ್ರತಿವಾದಿಗೆ ದಾವಾ ಮನೆಯಲ್ಲಿಯು ಕೂಡ ಸಹಿಸಲಾಗದ ಹಿಂಸೆ ನೀಡುತ್ತಿದ್ದು, 2 ನೇ ಪ್ರತಿವಾದಿಯು ಸಹಿಸಿಕೊಂಡಿರುತ್ತಾಳೆ. ದಾವಾ ಮನೆಯ ಹೊರತಾಗಿ ಈ ಪ್ರತಿವಾದಿಗೆ ವಾಸವಿರಲು ಬೇರೆ ಎಲ್ಲು ಅನುಕೂಲಗಳಿರುವುದಿಲ್ಲ. ದುರುದ್ದೇಶ ಪೂರ್ವಕವಾಗಿ ಈ ಪ್ರತಿವಾದಿಯ ವಿರುದ್ಧ ಸುಳ್ಳು ವಿಳಾಸ ನೀಡಿ ವಾದಿಯು ದಾವೆಯನ್ನು ದಾಖಲಿಸಿದ್ದು, 1 ನೇ ಪ್ರತಿವಾದಿಯು ಈ ಪ್ರತಿವಾದಿಯ ವಿರುದ್ಧ ಎಂ.ಸಿ.71/2025 ರಂತೆ ವಿಚ್ಚೇಧನ ಕೋರಿ ಅರ್ಜಿಯನ್ನು ಸಲ್ಲಿಸಿದ್ದು, ಸದರಿ ಅರ್ಜಿಯ ಕೊರ್ಟ ನೋಟಿಸ್ ಈ ಪ್ರತಿವಾದಿಗೆ ದಾವಾ ಸ್ವತ್ತಿನ ಮನೆಯ ವಿಳಾಸಕ್ಕೆ ಜಾರಿಯಾಗಿರುತ್ತದೆ. ಸದರಿ ವಿಚ್ಚೇಧನದ ಅರ್ಜಿಯಲ್ಲಿ ಈ ಪ್ರತಿವಾದಿಯು ಹಾಜರಾಗಿ ತನ್ನ ತಕರಾರನ್ನು ಸಲ್ಲಿಸಿರುತ್ತಾಳೆ. ವಾದಿ ಮತ್ತು 1 ನೇ ಪ್ರತಿವಾದಿ ಜಂಟಿಯಾಗಿ

ಈ ಪ್ರತಿವಾದಿಯನ್ನು ದಾವಾ ಮನೆಯಿಂದ ಹೊರಹಾಕುವ ಉದ್ದೇಶಕ್ಕಾಗಿ ಸುಳ್ಳು ಕಾರಣವನ್ನು ಸೃಷ್ಟಿಸಿ ಈ ದಾವೆ ಸಲ್ಲಿಸಿರುತ್ತಾರೆ. ವಾದಿಯ ಮನೆಯಲ್ಲಿ ಸಿ.ಸಿ. ಕ್ಯಾಮೆರಾಗಳಿದ್ದು, ದಿನಾಂಕ 18-11-2024 ರಿಂದ ಈ ವರೆಗಿನ ಅವಧಿಗೆ ದಾಖಲಾದ ಸದರಿ ಸಿ.ಸಿ. ಟಿ.ವಿಯ ದೃಶ್ಯಾವಳಿಗಳನ್ನು ಮಾನ್ಯ ನ್ಯಾಯಾಲಯವು ವಾದಿಯಿಂದ ಪಡೆದು ಪರಿಶೀಲಿಸಿದರೆ ಸತ್ಯಸಂಗತಿಗಳು ತಾನಾಗಿಯೇ ನಿರೂಪಣೆಯಾಗುತ್ತವೆ.

7. ವಾದಿಯು ದುರುದ್ದೇಶ ಪೂರ್ವಕವಾಗಿ, 2 ನೇ ಪ್ರತಿವಾದಿಯು 1 ನೇ ಪ್ರತಿವಾದಿಯೊಂದಿಗೆ ವಾಸವಾಗಿದ್ದಾಳೆಂದು ಸುಳ್ಳು ವಿಳಾಸ ನೀಡಿ, ಈ ದಾವೆಯನ್ನು ದಾಖಲಿಸಿರುತ್ತಾರೆ. ದಿನಾಂಕ 18-11-2024 ರಂದು ಈ ಪ್ರತಿವಾದಿಯು ವಾದಿಯ ಮನೆಗೆ ಬಂದು ನೆಲೆ ನಿಂತ ಲಾಗಾಯ್ತು 1 ನೇ ಪ್ರತಿವಾದಿಯು ತನ್ನ ಅಪ್ಪನ ಮನೆಗೆ ಬರುವುದನ್ನು ಅಂದರೆ, ದಾವಾ ಮನೆಗೆ ಬರುವುದನ್ನು ನಿಲ್ಲಿಸಿದ್ದಲ್ಲದೇ, ಪ್ರತಿವಾದಿಯೊಂದಿಗೆ ಮಾತನಾಡುವುದನ್ನು ಸಹ ನಿಲ್ಲಿಸಿರುತ್ತಾನೆ. ಈ ಪ್ರತಿವಾದಿಯು ಬಡತನ ಕುಟುಂಬದಿಂದ ಬಂದಿದ್ದು, 1 ನೇ ಪ್ರತಿವಾದಿಯು ನಿರೀಕ್ಷಿಸುವಷ್ಟು ಸ್ಪುರದ್ರೂಪಿಯಾಗಿರುವುದಿಲ್ಲ. ಹೇಗಾದರೂ ಮಾಡಿ, 1 ನೇ ಪ್ರತಿವಾದಿಗೆ

ಮರುಮದುವೆ ಮಾಡಬೇಕೆಂದು ವಾದಿಯು ಹವಣಿಸುತ್ತಿದ್ದು, ಈ ಪ್ರತಿವಾದಿಯು ಅಬಲೆಯಾಗಿ ಜೀವನ ನಡೆಸುವುದು ದುಸ್ತರವಾಗಿದೆ. ವಾದಿ ಮತ್ತು 1 ನೇ ಪ್ರತಿವಾದಿಯು ಗುಟ್ಟಾಗಿ ಕುಟುಂಬದ ಆಸ್ತಿಯನ್ನು ಪರಭಾರೆಗೊಳಿಸಿ, ಈ ಪ್ರತಿವಾದಿಯನ್ನು ಬೀದಿಗಿಳಿಸುವ ಪ್ರಯತ್ನ ಒಟ್ಟಾಗಿ ನಡೆಸಿದ್ದನ್ನು ತಿಳಿದ ಈ ಪ್ರತಿವಾದಿಯು 1 ನೇ ಪ್ರತಿವಾದಿಯಿಂದ ಜೀವನಾಂಶ ಕೇಳಿ ಸನ್ನಿಧಿ ನ್ಯಾಯಾಲಯದಲ್ಲಿ ದಿನಾಂಕ 05-11-2025 ರಂದು ಪಿ.ಮಿಸ್ ನಂ.1/2025 ರಂತೆ ನಿರ್ಧನಿಕಳ ದಾವೆ ಸಲ್ಲಿಸಿದ್ದು, ಸದರಿ ದಾವೆ ಇನ್ನೂ ತಿರ್ಮಾನಕ್ಕೆ ಬಾಕಿ ಇದೆ.

8. ವಾದಿ ಮತ್ತು 1 ನೇ ಪ್ರತಿವಾದಿ ಕುಟುಂಬಕ್ಕೆ ವಾರ್ಷಿಕ 25-30 ಲಕ್ಷ ಆದಾಯ ನೀಡುವ ಅಡಿಕೆ ತೋಟ ಮತ್ತು ಭತ್ತದ ಗದ್ದೆಗಳು ಇರುತ್ತವೆ. ಈ ಕುಟುಂಬಕ್ಕೆ ಆವಿನಹಳ್ಳಿ ಗ್ರಾಮದ ಮಜಿರೆ ಬಡವಗೋಡಿನಲ್ಲಿ ವಾಸಕ್ಕೆ ವಿಶಾಲವಾದ ಮನೆ ಇದ್ದು, 1 ನೇ ಪ್ರತಿವಾದಿಯು ಶಿವಮೊಗ್ಗದಲ್ಲಿ ಈ ಹಿಂದೆ ವಾಸವಾಗಿದ್ದ ಮನೆಯನ್ನು ವಿನಾಃ ಕಾರಣ ತೊರೆದಿದ್ದು, ಈ ಪ್ರತಿವಾದಿಗೆ ದಾವಾ ಮನೆಯ ಹೊರತಾಗಿ ವಾಸಕ್ಕೆ ಬೇರೆ ವ್ಯವಸ್ಥೆ ಇಲ್ಲ. ಪ್ರತಿವಾದಿಯನ್ನು ವಾಸದ ಮನೆಯಿಂದ ವಾಸದಿಂದ ನಿರ್ಬಂಧಿಸಿದ್ದಲ್ಲಿ ಈ

ಪ್ರತಿವಾದಿಯ ಬದುಕು ದಾರಿಗೆ ಬೀಳುತ್ತದೆ. 1 ನೇ ಪ್ರತಿವಾದಿಯು ಸ್ವತಂತ್ರ ತಿಳುವಳಿಕೆಯ ನೇರದಲ್ಲಿ ತೀರ್ಮಾನ ತೆಗೆದುಕೊಳ್ಳುವಷ್ಟು ಪ್ರಬುದ್ಧ ಸ್ವಭಾವದವನಾಗಿರುವುದಿಲ್ಲ. 1 ನೇ ಪ್ರತಿವಾದಿಯ ಬೌದ್ಧಿಕ ಮಟ್ಟವನ್ನು ದುರುಪಯೋಗ ಪಡಿಸಿಕೊಂಡು ವಾದಿ, ವಾದಿಯ ಹೆಂಡತಿಯು 1 ನೇ ಪ್ರತಿವಾದಿಗೆ ಬೇರೆ ಮದುವೆ ಮಾಡಬೇಕೆಂಬ ಕಾರಣದಿಂದ, 2 ನೇ ಪ್ರತಿವಾದಿಗೆ ವಿನಾಃಕಾರಣ ತೊಂದರೆ ನೀಡುತ್ತಿದ್ದಾರೆ. ಈ ದಾವೆಯಲ್ಲಾದ ಏಕತರ್ಪಿ ಆದೇಶದ ವಿಷಯವು ಈ ಪ್ರತಿವಾದಿಗೆ ತಿಳಿದಿದ್ದು, ಆ ತರುವಾಯ ನ್ಯಾಯಾಲಯದಲ್ಲಿ ಬಂದು ವಿಚಾರಿಸಿದಾಗ, ದಾವಾ ಸಂಗತಿಗಳು ತನಗೆ ಬಂದಿರುತ್ತದೆ. ಕಳೆದ 15-20 ದಿನಗಳಿಂದ ವಾದಿ ಮತ್ತು ವಾದಿಯ ಹೆಂಡತಿ ಈ ಪ್ರತಿವಾದಿಗೆ ಮನೆಯಲ್ಲಿ ಉಳಿಯಗೊಡಬಾರದೆಂದು ಹೀನಕೃತ್ಯದಲ್ಲಿ ತೊಡಗಿದ್ದರಿಂದ, ಸಾಗರದ ಗ್ರಾಮಾಂತರ ಪೋಲಿಸ್ ಠಾಣೆಗೆ ಈ ಪ್ರತಿವಾದಿಯು ದೂರವಾಣಿ ಕರೆ ಮಾಡಿದಾಗ, ಪೋಲಸ್ ಸಹಾಯವಾಣಿ ವಾಹನದಲ್ಲಿ ಬಡವಗೋಡಿನ ದಾವಾ ಮನೆಗೆ ಪೋಲಿಸರು ಬಂದು ಎಷ್ಟೇ ಕರೆದರೂ ಸಹ ವಾದಿಯು ದಾವಾ ಮನೆಯ ಮುಂಬಾಗಿಲಿಗೆ ಒಳಗಿನಿಂದ ಬೀಗ ಹಾಕಿ ಪೋಲಿಸರು ಒಳಗೆ

ಬರದಂತೆ ತಡೆದಿರುತ್ತಾರೆ. ಆದ್ದರಿಂದ, ವಾದಿಯ ದಾವೆಯು ಕಾನೂನಿನ ಪ್ರಕಾರ ನಿಲ್ಲತಕ್ಕದ್ದಲ್ಲ. 1 ನೇ ಪ್ರತಿವಾದಿಯಾಗಲೀಅಥವಾ ವಾದಿಯಾಗಲೀ ವಾಸ ಮತ್ತು ಜೀವನಕ್ಕೆ ಪರ್ಯಾಯ ವ್ಯವಸ್ಥೆ ಮಾಡಿಕೊಡುವವರೆಗೂ ಈ ಪ್ರತಿವಾದಿಯು ದಾವಾ ಮನೆಯಲ್ಲಿ ವಾಸ ಮಾಡುವ ಹಕ್ಕು ಹೊಂದಿರುವುದರಿಂದ, ಈ ದಾವೆಯು ಕಿರುಕುಳ ವ್ಯಾಜ್ಯ ವೆಂದು ಪರಿಗಣಿಸಿ ದಾವೆಯನ್ನು ವೆಚ್ಚಗಳ ಸಹಿತ ವಜಾಗೊಳಿಸುವುದಲ್ಲದೇ, ಮಧ್ಯಂತರ ಅರ್ಜಿ ಸಂಖ್ಯೆ–1 ನ್ನು ಸಹ ವೆಚ್ಚಗಳ ಸಹಿತ ತಿರಸ್ಕ್ರುತಗೊಳಿಸಬೇಕೆಂದು ಕೋರಿರುತ್ತಾರೆ.

9. ಉಭಯ ಪಕ್ಷಗಾರರ ವಕೀಲರು ಮಂಡಿಸಿರುವ ವಾದವನ್ನು ಆಲಿಸಿದೆ, ಮತ್ತು ಪಕ್ಷಗಾರರು ನ್ಯಾಯಾಲಯಕ್ಕೆ ಸಲ್ಲಿಸಿರುವ ಈ ದಾವೆಗೆ ಸಂಬಂಧಪಟ್ಟ ಎಲ್ಲಾ ದಾಖಲೆಗಳನ್ನು ಕೂಲಂಕುಷವಾಗಿ ಪರಿಶೀಲಿಸಲಾಯಿತು.

10. **ಸಂದರ್ಭದಲ್ಲಿ ನ್ಯಾಯಾಲಯದ ಪರಿಗಣನೆಗೆ ಈ ಕೆಳಕಂಡ ಅಂಶಗಳು ಉದ್ಭವಿಸಿರುತ್ತವೆ**.

**ಅಂಶ –1** ವಾದಿಯು ತನ್ನ ಪರವಾಗಿ ಮೇಲ್ನೋಟದ ದಾವೆ ಇದೆ ಎಂದು ಸಾಭೀತುಪಡಿಸುವರೇ ?

**ಅಂಶ –2** ಅನುಕೂಲತೆಯ ಒಲವು ವಾದಿಯ ಪರವಾಗಿದೆಯೇ?

**ಅಂಶ –3** ವಾದಿಗೆ ಮಧ್ಯಂತರ ಅರ್ಜಿ ಸಂಖ್ಯೆ 1ನ್ನು ವಜಾಗೊಳಿಸುವುದರಿಂದ ತುಂಬಲಾರದ ನಷ್ಟ ಹಾಗೂ ಸರಿಪಡಿಸಲಾಗದ ಕ್ಷತಿ ಉಂಟಾಗುತ್ತದೆಯೇ?

**ಅಂಶ–4** ಯಾವ ಆದೇಶ?

11. ಮೇಲಿನ ಅಂಶಗಳಿಗೆ ನ್ಯಾಯಾಲಯವು ಈ ಕೆಳಕಂಡಂತೆ ಉತ್ತರಿಸುತ್ತದೆ.

**ಅಂಶಃ 1** **ನಕಾರಾತ್ಮಕವಾಗಿ,**

**ಅಂಶಃ 2** **ನಕಾರಾತ್ಮಕವಾಗಿ,**

**ಅಂಶಃ 3** **ನಕಾರಾತ್ಮಕವಾಗಿ,**

**ಅಂಶಃ4** ಈ ಕೆಳಕಂಡ ಕಾರಣಗಳಿಗಾಗಿ ಅಂತಿಮ ಆದೇಶದಂತೆಃ–

:**ಕಾರಣಗಳು**:

12. **ಅಂಶಃ 1 ರಿಂದ 3 :** ಮೇಲಿನ ಅಂಶ–1 ರಿಂದ 3 ಒಂದಕ್ಕೊಂದು ಅಂತರ ಸಂಬಂಧ ಹೊಂದಿರುವುದರಿಂದ, ಚರ್ಚೆಯ

ಪುನರಾವರ್ತನೆಯನ್ನು ತಪ್ಪಿಸಲು, ಎಲ್ಲಾ ಅಂಶಗಳನ್ನು ಒಟ್ಟಿಗೆ ಚರ್ಚೆಗೆ ತೆಗೆದುಕೊಳ್ಳಲಾಗಿದೆ.

13. ದಾವಾ ಮನೆಯು ತನಗೆ ಕುಟುಂಬದ ವಿಭಾಗದ ಮೂಲಕ ಬಂದಿದ್ದು, ತಾನು ದಾವಾ ಸ್ವತ್ತಿನ ಮನೆಯಲ್ಲಿ ತನ್ನ ಪತ್ನಿಯೊಂದಿಗೆ ಶಾಂತಿಯುತವಾಗಿ ಸ್ವಾಧೀನಾನುಭವದಲ್ಲಿದ್ದು, ಸದರಿ ಸ್ವತ್ತಿನಲ್ಲಿನ ವಾದಿಯ ಸ್ವಾಧೀನಾನುಭವಕ್ಕೆ ಪ್ರತಿವಾದಿಯರು ವಿನಾಃಕಾರಣ ತೊಂದರೆ ನೀಡುತ್ತಿರುವುದರಿಂದ ಅವರನ್ನು ದಾವೆಯು ಅಂತಿಮವಾಗಿ ನಿರ್ಣಯವಾಗುವವರೆಗೆ ತಾತ್ಕಾಲಿಕವಾಗಿ ಪ್ರತಿಬಂಧಿಸಬೇಕೆಂದು ವಾದಿಯು ತನ್ನ ಪ್ರಮಾಣಪತ್ರದಲ್ಲಿ ಹೇಳಿರುತ್ತಾರೆ. ವಾದಿ ಪರ ವಕೀಲರು ತಮ್ಮ ಮಧ್ಯಂತರ ಅರ್ಜಿಗೆ ಪೂರಕವಾಗಿ ಮಾನ್ಯ ರಾಜಸ್ಥಾನ ಉಚ್ಚ ನ್ಯಾಯಾಲಯದ ನಿರ್ಧರಿತ ಪ್ರಕರಣವಾದ S.B Civil II Appeal No.177/2025 ರ ತೀರ್ಪನ್ನು ಅವಲಂಬಿಸಿರುತ್ತಾರೆ.

14. 1 ನೇ ಪ್ರತಿವಾದಿಯು ಮಧ್ಯಂತರ ಅರ್ಜಿ ಸಂಖ್ಯೆ –1 ಕ್ಕೆ ಯಾವುದೇ ತಕರಾರನ್ನು ಸಲ್ಲಿಸಿರುವುದಿಲ್ಲ. 2 ನೇ ಪ್ರತಿವಾದಿಯು ತನ್ನ ವಿವರವಾದ ತಕರಾರನ್ನು ಸಲ್ಲಿಸಿದ್ದು, 1 ನೇ ಪ್ರತಿವಾದಿ ಮತ್ತು ವಾದಿಯು ಪರಸ್ಪರ

ಮಿಲಾಫಿಯಾಗಿ ತನ್ನನ್ನು ದಾವಾ ಮನೆಯಿಂದ ಹೊರಹಾಕಬೇಕೆಂಬ ದುರುದ್ದೇಶದಿಂದ ಈ ದಾವೆಯನ್ನು ಸಲ್ಲಿಸಿದ್ದು, ತಾನು ಸಹ ದಾವಾ ಮನಯಲ್ಲಿ ವಾಸವಾಗಿರುವುದರಿಂದ, ಸದರಿ ಮಧ್ಯಂತರ ಅರ್ಜಿ ಸಂಖ್ಯೆ-1 ನ್ನು ತಿರಸ್ಕರಿಸಬೇಕೆಂದು 2 ನೇ ಪ್ರತಿವಾದಿಯು ಕೋರಿರುತ್ತಾರೆ. ಸದರಿ ಪ್ರತಿವಾದಿ ಪರ ವಕೀಲರು ಗೌರವಾನ್ವಿತ ಕರ್ನಾಟಕ ಉಚ್ಚ ನ್ಯಾಯಾಲಯದ ILR 1989 KAR 1701 ರ ತೀರ್ಪನ್ನು ಅವಲಂಬಿಸಿರುತ್ತಾರೆ.

15. ವಾದಿ ಮತ್ತು ಪ್ರತಿವಾದಿಯರು ಸಲ್ಲಿಸಿರುವ ವಾದ ಮತ್ತು ಪ್ರತಿವಾದ ಪತ್ರ ಹಾಗೂ ಮಧ್ಯಂತರ ಅರ್ಜಿ ಸಂಖ್ಯೆ -1 ಹಾಗೂ ದಾಖಲೆಗಳನ್ನು ಕೂಲಂಕಷವಾಗಿ ಪರಿಶೀಲಿಸಲಾಯಿತು. ಅದೇರೀತಿಯಾಗಿ, ಸಿವಿಲ್ ಪ್ರಕ್ರಿಯಾ ಸಂಹಿತೆಯ ಕ್ರಮಾದೇಶ 39 ನಿಯಮ 1 ಮತ್ತು 2 ನ್ನು ಗಮನದಲ್ಲಿರಿಸಿಕೊಂಡು, ಪ್ರಸ್ತುತ ಕೇಸಿನ ದಾಖಲೆಗಳನ್ನು ಪರಿಶೀಲನೆ ಮಾಡಿರುತ್ತದೆ. ಸಿವಿಲ್ ಪ್ರಕ್ರಿಯಾ ಸಂಹಿತೆಯ ಕ್ರಮಾದೇಶ 39 ನಿಯಮ 1 ಮತ್ತು 2 ರಂತೆ ಪರಿಹಾರ ಪಡೆಯಲು ವಾದಿಯು ಅಗತ್ಯವಾದ ಮೂಲಭೂತ ಅಂಶಗಳಾದ ಮೇಲ್ನೋಟದ ದಾವೆ,

ಅನುಕೂಲತೆಯ ಒಲವು, ಹಾಗೂ ತುಂಬಲಾರದ ನಷ್ಟ ಇವುಗಳನ್ನು ಕಡ್ಡಾಯವಾಗಿ ಸಾಭೀತುಪಡಿಸಬೇಕಾಗುತ್ತದೆ.

16. ವಾದಿಯು ದಾವಾ ಸ್ವತ್ತು ತನಗೆ ಕುಟುಂಬದ ವಿಭಾಗದಲ್ಲಿ ಬಂದಿರುವುದಾಗಿ ಹೇಳಿದ್ದಾರೆ. ಸದರಿ ವಾದಿಯು ಹಾಜರುಪಡಿಸಿರುವ ದಾಖಲೆಗಳನ್ನು ಪರಿಶೀಲಿಸಲಾಗಿ, ತನ್ನ ದಾವೆ ಹಾಗೂ ಮಧ್ಯಂತರ ಅರ್ಜಿ ಸಂಖ್ಯೆ-1 ಕ್ಕೆ ಪೂರಕವಾಗಿ ವಾದಿಯು ದಾವಾ ಆಸ್ತಿಯ ನಮೂನೆ-3 ನ್ನು ಹಾಜರುಪಡಿಸಿದ್ದು, ಅದರಂತೆ ವಾದಿಯು ದಾವಾ ಸ್ವತ್ತಿನ ಮಾಲೀಕರಾಗಿ ಸ್ವಾಧೀನ ಹೊಂದಿರುತ್ತಾರೆ. ಅದೇ ರೀತಿಯಾಗಿ 2025 -26 ನೇ ಸಾಲಿನ ಡಿಮ್ಯಾಂಡ್ ರಿಜಿಸ್ಟರ್ ನ ನಕಲನ್ನು ಪ್ರತಿಯನ್ನು ಹಾಜರುಪಡಿಸಿರುತ್ತಾರೆ ಮತ್ತು ದಾವಾ ಸ್ವತ್ತಿಗೆ ತೆರಿಗೆ ಪಾವತಿಸಿದ ಬಗ್ಗೆ ರಶೀದಿಯನ್ನು ಸಹ ಹಾಜರುಪಡಿಸಿರುತ್ತಾರೆ. ಸದರಿ ವಾದಿಯು ದಿನಾಂಕ 28-03-2003 ರ ಹಿಸ್ಸೆ ಪತ್ರವನ್ನು ಹಾಜರುಪಡಿಸಿದ್ದು, ಸದರಿ ಹಿಸ್ಸೆ ಪತ್ರದಂತೆ ವಾದಿಗೆ ದಾವಾ ಮನೆಯು ಕುಟುಂಬದ ಹಿಸ್ಸೆ ಮೂಲಕ ಬಂದಿರುತ್ತದೆ. ಆ ಮೂಲಕ ವಾದಿಯು ದಾವಾ ಸ್ವತ್ತಿನ ಮಾಲೀಕನಾಗಿ ಸ್ವಾಧೀನಾನುಭವದಲ್ಲಿರುತ್ತಾರೆ.

17. 2 ನೇ ಪ್ರತಿವಾದಿಯು ತನ್ನ ತಕರಾರು ಹಾಗೂ ಪ್ರತಿವಾದ ಪತ್ರದಲ್ಲಿ ತಾನು ದಿನಾಂಕ 18-11-2024 ರಂದು ದಾವಾ ಮನೆಗೆ ಬಂದು ಉಳಿದುಕೊಂಡಿರುವುದಾಗಿ ಹೇಳಿದ್ದಾರೆ. ಈ ಕುರಿತಂತೆ ಪ್ರತಿವಾದಿಯು ಎಂ.ಸಿ.ನಂ.71/2025 ರ ನೊಂದಾಯಿತ ಅಂಚೆ ಲಕೋಟೆಯನ್ನು ಹಾಜರುಪಡಿಸಿರುತ್ತಾರೆ. ಸದರಿ ಲಕೋಟೆಯಂತೆ ನ್ಯಾಯಾಲಯದಿಂದ ನೀಡಿದ ನೋಟಿಸ್ಸು /ಸಮನ್ಸ್ ಪ್ರತಿವಾದಿಗೆ ದಾವಾ ಸ್ವತ್ತಿನ ವಿಳಾಸದಲ್ಲಿ ಜಾರಿಯಾಗಿರುವುದು ಕಂಡು ಬಂದಿರುತ್ತದೆ. ಈ ಪ್ರತಿವಾದಿ ಹಾಗೂ 1 ನೇ ಪ್ರತಿವಾದಿಯು, ವಾದಿಯ ಮಗ ಮತ್ತು ಸೊಸೆ ಎಂಬುದಾಗಿ ವಾದಿಯು ಸ್ವತಃ ತನ್ನ ವಾದಪತ್ರದಲ್ಲಿ ಹೇಳಿರುತ್ತಾರೆ. ಸದರಿ 2 ನೇ ಪ್ರತಿವಾದಿಯು, 1 ನೇ ಪ್ರತಿವಾದಿಯ ಪತ್ನಿಯಾಗಿದ್ದು, ಅವರ ವಿವಾಹವನ್ನು 2019 ರಲ್ಲಿ ವಾದಿಯೇ ತನ್ನ ಸ್ವಂತ ಖರ್ಚಿನಲ್ಲಿ ನಿರ್ವಹಿಸಿದ್ದಾಗಿ ತನ್ನ ವಾದಪತ್ರದಲ್ಲಿ ಹೇಳಿದ್ದು, ಅದನ್ನು ಈ ಪ್ರತಿವಾದಿಯು ಸಹ ತನ್ನ ಪ್ರತಿವಾದ ಪತ್ರದಲ್ಲಿ ಒಪ್ಪಿಕೊಂಡಿರುತ್ತಾರೆ.

18. ವಿವಾಹದ ಕೆಲವು ದಿನಗಳವರೆಗೆ ವಾದಿಯೊಂದಿಗೆ ಪ್ರತಿವಾದಿಯರು ವಾಸವಾಗಿದ್ದರೂ ಎಂದು ಸಹ ನಿರ್ವಿವಾದ. ವಿವಾಹವಾದ ಸಂದರ್ಭದಲ್ಲಿ

1 ನೇ ಪ್ರತಿವಾದಿಯು ಖಾಸಗಿ ಕಂಪನಿಯಲ್ಲಿ ಬೆಳಗಾವಿಯಲ್ಲಿ ನೆಲೆಸಿದ್ದರಿಂದ ಅವರೊಂದಿಗೆ ಈ ಪ್ರತಿವಾದಿಯು ಸಹ ಬೆಳಗಾವಿಯಲ್ಲಿ ಹೋಗಿ ನೆಲೆಸಿರುತ್ತಾರೆ. ಆನಂತರ 1 ನೇ ಪ್ರತಿವಾದಿಗೆ ಶಿವಮೊಗ್ಗಕ್ಕೆ ವರ್ಗಾವಣೆಗೊಂಡ ಕಾರಣ ಅವನೊಂದಿಗೆ 2 ನೇ ಪ್ರತಿವಾದಿಯು ಸಹ ಶಿವಮೊಗ್ಗದಲ್ಲಿ ದಾಂಪತ್ಯ ಜೀವನವನ್ನು ಪ್ರಾರಂಭಿಸಿರುತ್ತಾರೆ.

19. ಈ ಪ್ರತಿವಾದಿಯ ನಿರ್ದಿಷ್ಟ ಪ್ರತಿರಕ್ಷೆ ಏನೆಂದರೆ, ವಿವಾಹವಾಗಿ 6 ವರ್ಷವಾದರೂ ಸಹ ಪ್ರತಿವಾದಿಯರಿಗೆ ಮಕ್ಕಳು ಆಗಲಿಲ್ಲ ಎಂಬ ಕಾರಣಕ್ಕಾಗಿ, ವಾದಿಯು ತನ್ನ ಪತ್ನಿ ಹಾಗೂ ಮಗಳಾದ ವಿನುತರವರ ಚಿತಾವಣೆಯಿಂದಾಗಿ 1 ನೇ ಪ್ರತಿವಾದಿಯು ಪ್ರತಿದಿನ 2 ನೇ ಪ್ರತಿವಾದಿಗೆ ಕಿರುಕುಳ ನೀಡುತ್ತಿದ್ದಾರೆ. ಆದಕಾರಣ, ಹೇಗಾದರೂ ಮಾಡಿ, ಈ ಪ್ರತಿವಾದಿಯನ್ನು ದಾವಾ ಮನೆಯಿಂದ ಹೊರಹಾಕಿ, 1 ನೇ ಪ್ರತಿವಾದಿಯ ದಾಂಪತ್ಯದಿಂದ ದೂರ ಮಾಡಿ, 1 ನೇ ಪ್ರತಿವಾದಿಗೆ ಬೇರೊಂದು ವಿವಾಹ ಮಾಡುವ ದುರದ್ದೇಶದಿಂದ 2 ನೇ ಪ್ರತಿವಾದಿಗೆ ಇಲ್ಲಸಲ್ಲದ ಕಿರುಕುಳ ನೀಡುತ್ತಿದ್ದಾರೆ ಎಂಬುದಾಗಿರುತ್ತದೆ.

20. ಸದರಿ 1 ಮತ್ತು 2 ನೇ ಪ್ರತಿವಾದಿಯರ ನಡುವೆ ದಾಂಪತ್ಯ ಜೀವನವು ಸರಿಯಾಗಿ ಇಲ್ಲ ಎಂಬುದು ಪ್ರತಿವಾದಿಯು ಸಲ್ಲಿಸಿದ ಪ್ರತಿವಾದ ಪತ್ರದಿಂದ ಕಂಡು ಬರುತ್ತದೆ. ಅಲ್ಲದೇ ಈಗಾಗಲೇ 1 ನೇ ಪ್ರತಿವಾದಿಯು 2 ನೇ ಪ್ರತಿವಾದಿಯ ವಿರುದ್ಧ ವಿವಾಹ ವಿಚ್ಛೇಧನ ಕೋರಿ ಎಂ.ಸಿ.71/2025 ರಂತೆ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಸದರಿ ಅರ್ಜಿಯು ವಿಚಾರಣೆಗೆ ಬಾಕಿ ಇರುತ್ತದೆ. ಈ ಪ್ರತಿವಾದಿಯು ಹೇಳುವಂತೆ, 1 ನೇ ಪರ 2 ವದಿಯು ಬೆಳಗಾವಿಯಿಂದ ಶಿವಮೊಗ್ಗಕ್ಕೆ ವರ್ಗಾವಣೆಯಾದ ನಂತರ ದಿನಾಂಕ 16-11-2024 ರಂದು 2 ನೇ ಪ್ರತಿವಾದಿಯು ಶಾಲೆಗೆ ಕೆಲಸಕ್ಕೆ ಹೋಗಿದ್ದ ಸಂದರ್ಭದಲ್ಲಿ 1 ನೇ ಪ್ರತಿವಾದಿಯು ಏಕಾಏಕಿ ತನ್ನ ಬಟ್ಟೆಬರೆ, ಪಾತ್ರೆ ಹಾಗೂ ಫರ್ನೀಚರ್ ಗಳೆಲ್ಲವನ್ನು ತೆಗೆದುಕೊಂಡು ಗೊತ್ತಿಲ್ಲದ ಸ್ಥಳಕ್ಕೆ ಸಾಗಿಸಿ, ಮನೆಯನ್ನು ಖಾಲಿ ಮಾಡಿ ಹೋಗಿರುತ್ತಾನೆ. 2 ನೇ ಪ್ರತಿವಾದಿಯು ಶಾಲೆಯಿಂದ ಮರಳಿ 1 ನೇ ಪ್ರತಿವಾದಿ ಮತ್ತು ವಾದಿಗೆ ದೂರವಾಣಿ ಕರೆ ಮಾಡಿದರೂ ಸಹ ಅವರು ಸರಿಯಾಗಿ ಸ್ಪಂದಿಸದೇ ಹಾಗೂ ಫೋನ್ ಕರೆಗಳನ್ನು ಸ್ವೀಕರಿಸದೇ ಇದ್ದರಿಂದ, 2 ದಿನಗಳ ಕಾಲ ಶಿವಮೊಗ್ಗದ ಮನೆಯಲ್ಲಿ ಉಳಿದುಕೊಂಡು ನಂತರ ದಿನಾಂಕ 18-11-2024 ರಂದು ಈ ಪ್ರತಿವಾದಿಯು, ವಾದಿಯ

ಮನೆಗೆ ಬಂದು ಉಳಿದುಕೊಂಡಿರುತ್ತಾಳೆ. ಈ ಪ್ರತಿವಾದಿಯು, ವಾದಿಯ ಮನೆಗೆ ಬಂದು ಉಳಿದುಕೊಂಡಿದ್ದರಿಂದ, ಅವಳನ್ನು ಹೇಗಾದರೂ ಮಾಡಿ, ದಾವಾ ಮನೆಯಿಂದ ಹೊರಹಾಕುವ ಯತ್ನವಾಗಿ ಸುಳ್ಳು ವ್ಯಾಜ್ಯ ವನ್ನು ಸೃಷ್ಟಿಸಿಕೊಂಡು ಈ ದಾವೆಯನ್ನು ಸಲ್ಲಿಸಿರುವುದಾಗಿ ಸಾಧನೆ ಮಾಡಿರುತ್ತಾಳೆ.

21. ಪ್ರತಿವಾದಿಯು ಹಾಜರುಪಡಿಸಿದ ಅಂಚೆ ಲಕೋಟೆಯಂತೆ ದಾವಾ ಸ್ವತ್ತಿನ ವಿಳಾಸದಲ್ಲಿ ಅವಳಿಗೆ ನೋಟಿಸ್ಸು ಜಾರಿಯಾಗಿರುತ್ತದೆ. ಆದಕಾರಣ, ಸದರಿ ಮನೆಯಲ್ಲಿ 2 ನೇ ಪ್ರತಿವಾದಿಯು ವಾಸವಾಗಿದ್ದಾಳೆಂದು ಮೇಲ್ನೋಟಕ್ಕೆ ಸ್ಪಷ್ಟವಾಗಿರುತ್ತದೆ. ಸದರಿ 1 ಮತ್ತು 2 ನೇ ಪ್ರತಿವಾದಿಯರ ನಡುವೆ ವಾಸ್ತವವಾಗಿ ವ್ಯಾಜ್ಯ ಇರುವುದು ಮೇಲ್ನೋಟಕ್ಕೆ ಸ್ಪಷ್ಟವಾಗಿ ಕಂಡು ಬಂದಿರುತ್ತದೆ. ಆದರೆ, ಈ ಪ್ರತಿವಾದಿಯು ದಾವಾ ಮನೆಯಲ್ಲಿ ಇದ್ದಾಗಲೇ, 1 ನೇ ಪ್ರತಿವಾದಿಯೊಂದಿಗೆ ವಿವಾಹವಾಗಿರುತ್ತಾಳೆ. ಅಲ್ಲದೇ ತಮ್ಮ ದಾಂಪತ್ಯ ಜೀವನವನ್ನು ದಾವಾ ಮನೆಯಲ್ಲಿ ಪ್ರಾರಂಭ ಮಾಡಿರುತ್ತಾಳೆ. ತದನಂತರ, ತಾತ್ಕಾಲಿಕವಾಗಿ ಬೆಳಗಾವಿ ಹಾಗೂ ಶಿವಮೊಗ್ಗದಲ್ಲಿ ಈ ಪ್ರತಿವಾದಿಯು 1 ನೇ

ಪ್ರತಿವಾದಿಯೊಂದಿಗೆ ವಾಸವಾಗಿರುತ್ತಾಳೆ. ಸದರಿ 1 ನೇ ಪ್ರತಿವಾದಿಯು 1 ನೇ ಪ್ರತಿವಾದಿಯ ಗಂಡನಾಗಿ ಅವಳ ಜೀವನೋಪಾಯಕ್ಕೆ ಹಾಗೂ ವಾಸವಾಗಿರಲು ಅಗತ್ಯವಿರುವ ವಸತಿ ಸೌಲಭ್ಯವನ್ನು ಒದಗಿಸುವ ಬಾಧ್ಯತೆಯನ್ನು ಹೊಂದಿರುತ್ತಾರೆ. ಈ ಪ್ರತಿವಾದಿಯು ದಾವಾ ಮನೆಯಲ್ಲಿ ಯಾವುದೇ ಕಾನೂನು ರೀತಿಯ ಹಿಸ್ಸೆ ಹಕ್ಕನ್ನು ಹೊಂದಿಲ್ಲ. ಆದರೆ, ವಾದಿಗೆ ದಾವಾ ಸ್ವತ್ತು ಕುಟುಂಬದ ವಿಭಾಗದ ಮೂಲಕ ಬಂದಿರುವುದರಿಂದ, ಸದರಿ ದಾವಾ ಸ್ವತ್ತು ವಾದಿಯ ಸ್ವಯಾರ್ಜಿತ ಸ್ವತ್ತು ಆಗಿರುವುದಿಲ್ಲ. ಆದಕಾರಣ, ಸದರಿ ದಾವಾ ಸ್ವತ್ತಿನಲ್ಲಿ ವಾದಿಯಂತೆ, 1 ನೇ ಪ್ರತಿವಾದಿಗೂ ಸಹ ಸಮಾನ ಹಿಸ್ಸೆಯ ಹಕ್ಕು ಇರುತ್ತದೆ. 1 ನೇ ಪ್ರತಿವಾದಿಯು 2 ನೇ ಪ್ರತಿವಾದಿಯ ಖಾಸಾ ಗಂಡನಾಗಿರುವುದರಿಂದ, ಸದರಿ 1 ನೇ ಪ್ರತಿವಾದಿಯಂತೆ ದಾವಾ ಸ್ವತ್ತಿನಲ್ಲಿ 2 ನೇ ಪ್ರತಿವಾದಿಗೆ ವಾಸಿಸುವ ಹಕ್ಕು ಇರುತ್ತದೆ.

22. ದಾವೆ ಹೂಡುವ ದಿನದಂದು ವಾದಿಯಂತೆ 2 ನೇ ಪ್ರತಿವಾದಿಯೂ ಸಹ ದಾವಾ ಮನೆಯಲ್ಲಿ ವಾಸ ವಾಗಿರುವುದು, ಪ್ರತಿವಾದಿಯು ಹಾಜರುಪಡಿಸಿದ ಅಂಚೆ ಲಕೋಟೆಯಿಂದ ಕಂಡು ಬಂದಿರುತ್ತದೆ. ಸದರಿ

ಮನೆಯಲ್ಲಿ ವಾದಿಗೆ, ಪ್ರತಿವಾದಿಯರು ಕಿರುಕುಳ ನೀಡುತ್ತಿದ್ದಾರೆಯೇ ಅಥವಾ ಇಲ್ಲವೇ ಎಂಬುದನ್ನು ಈ ಹಂತದಲ್ಲಿ ನಿರ್ಧರಿಸಲು ಸಾಧ್ಯ ಆಗುವುದಿಲ್ಲ. ಈ ಪ್ರತಿವಾದಿಯು ದಾವಾ ಮನೆಯಲ್ಲಿ ವಾಸವಾಗಿರುವುದರಿಂದ, ಸದರಿ ಪ್ರತಿವಾದಿಯ ದಾವಾ ಮನೆಯಲ್ಲಿನ ವಾಸವು ಕಾನೂನುಬಾಹಿರ ಎಂದು ಹೇಳಲು ಆಗುವುದಿಲ್ಲ. ಕಾರಣ, ಸದರಿ ಪ್ರತಿವಾದಿಯು ದಾವಾ ಮನೆಯಲ್ಲಿ ಕುಟುಂಬದ ಒಬ್ಬ ಸದಸ್ಯಳಾಗಿ, ವಾಸಿಸುವ ಹಕ್ಕನ್ನು ಹೊಂದಿರುವುದರಿಂದ, ಈ ಹಂತದಲ್ಲಿ ಸದರಿ ಮನೆಯಲ್ಲಿ ವಾಸ ಮಾಡದಂತೆ, 2 ನೇ ಪ್ರತಿವಾದಿಯ ವಿರುದ್ಧ ಪ್ರತಿಬಂಧಕಾಜ್ಞೆ ಆದೇಶವನ್ನು ನೀಡಿದ್ದಲ್ಲಿ, ಸದರಿ ಪ್ರತಿವಾದಿಗೆ ವಾಸಿಸಲು ಮನೆಯು ಇಲ್ಲದಂತಾಗಿ ಪ್ರತಿವಾದಿಯು ಬೀದಿಗೆ ಬರುವ ಎಲ್ಲಾ ಸಾಧ್ಯತೆಗಳು ಇರುತ್ತವೆ. ಮೇಲಾಗಿ ಸದರಿ ಪ್ರತಿವಾದಿಯು ಒಬ್ಬ ಮ ಹಿಳೆಯಾಗಿರುತ್ತಾಳೆ.

23. 1 ನೇ ಪ್ರತಿವಾದಿಯೊಂದಿಗೆ 2 ನೇ ಪ್ರತಿವಾದಿಯ ದಾಂಪತ್ಯ ಜೀವನವು ಸರಿಯಾಗಿಲ್ಲದ ಕಾರಣ, ಅವಳ ಜೀವನೋಪಾಯಕ್ಕೆ ಮತ್ತು ವಸತಿ ಉದ್ದೇಶಕ್ಕೆ ಸೂಕ್ತ ವ್ಯವಸ್ಥೆ ಮಾಡುವ ಜವಾಬ್ದಾರಿಯು 1 ನೇ

ಪ್ರತಿವಾದಿಯ ಮೇಲೆ ಇರುತ್ತದೆ. ಆದರೆ, ಈ ಪ್ರತಿವಾದಿಯು ತನ್ನ ಪ್ರತಿವಾದ ಪತ್ರದಲ್ಲಿ ಆಪಾದಿಸಿದಂತೆ, ಏಕಾಏಕಿ ಶಿವಮೊಗ್ಗದ ಮನೆಯನ್ನು ಈ ಪ್ರತಿವಾದಿಯು ಖುಲ್ಲಾಪಡಿಸಿ, 2 ನೇ ಪ್ರತಿವಾದಿಗೆ ತಿಳಿಯದೇ ಇರುವಂತಹ ವಿಳಾಸದಲ್ಲಿ ವಾಸವಾಗಿರುತ್ತಾನೆ. ಅದೂ ಅಲ್ಲದೇ ಸದರಿ 1 ನೇ ಪ್ರತಿವಾದಿಯು ಸಮನ್ಸ್ ಜಾರಿಯಾಗಿದ್ದರೂ ಸಹ ನ್ಯಾಯಾಲಯದ ಮುಂದೆ ಹಾಜರಾಗಿ ತನ್ನ ತಕರಾರನ್ನು ಮಧ್ಯಂತರ ಅರ್ಜಿ ಸಂಖ್ಯೆ-1 ಕ್ಕೆ ಸಲ್ಲಿಸಿರುವುದಿಲ್ಲ. ಈ ಎಲ್ಲಾ ಅಂಶಗಳನ್ನು ಪರಿಗಣಿಸಿದಾಗ ವಾದಿ ಮತ್ತು 1 ನೇ ಪ್ರತಿವಾದಿಯು ಪರಸ್ಪರ ಕೈಜೋಡಿಸಿ, ಈ ಪ್ರತಿವಾದಿಯನ್ನು ದಾವಾ ಮನೆಯಿಂದ ಹೊರಹಾಕುವ ಸಂಚನ್ನು ರೂಪಿಸಿದ್ದಾರೆಂದು ಸ್ಪಷ್ಟವಾಗುತ್ತದೆ. ಪ್ರತಿವಾದಿ ಪರ ಅವಲಂಬಿಸಿರುವ ತೀರ್ಪಿನಲ್ಲಿ ತಾತ್ಕಾಲಿಕ ಪ್ರತಿಬಂಧಕಾಜ್ಞೆ ಆದೇಶವನ್ನು ನೀಡುವಾಗ, ನ್ಯಾಯಾಲಯವು ಪರಿಗಣಿಸಬೇಕಾದ ಅಂಶಗಳ ಕುರಿತು ಗೌರವಾನ್ವಿತ ನ್ಯಾಯಾಲಯವು ವಿವರವಾಗಿ ಚರ್ಚಿಸಿರುತ್ತದೆ. ಪ್ರಸ್ತುತ ಪ್ರಕರಣದಲ್ಲಿ ಮೇಲಿನ ಕಾರಣಗಳಿಂದಾಗಿ, ವಾದಿಯ ಪರವಾಗಿ ಈ ಹಂತದಲ್ಲಿ ಮೇಲ್ನೋಟದ ದಾವೆ ಇರುವುದಿಲ್ಲ ಹಾಗೂ ಅನುಕೂಲತೆಯ ಒಲವು ಸಹ ವಾದಿಯ ಪರವಾಗಿ

ಇರುವುದಿಲ್ಲ ಎಂದು ಕಂಡು ಬಂದಿರುತ್ತದೆ. ಒಂದು ವೇಳೆ ಸದರಿ ಮಧ್ಯಂತರ ಅರ್ಜಿ ಸಂಖ್ಯೆ-1 ನ್ನು ಪುರಸ್ಕರಿಸಿ, 2 ನೇ ಪ್ರತಿವಾದಿಯು ದಾವಾ ಮನೆಗೆ ಹೋಗದಂತೆ ನಿರ್ಬಂಧಿಸಿದ್ದಲ್ಲಿ, ಈ ಪ್ರತಿವಾದಿಗೆ ವಾಸಿಸಲು ಮನೆ ಇಲ್ಲದಂತಾಗಿ ಅವಳು ಜೀವನ ನಡೆಸುವುದು ದುಸ್ತರವಾಗುತ್ತದೆ ಮತ್ತು ಈ ಪ್ರತಿವಾದಿಯು ಬೀದಿಗೆ ಬರುವ ಎಲ್ಲಾ ಸಾಧ್ಯತೆಗಳು ಇರುತ್ತವೆ. ಆ ಕಾರಣದಿಂದಾಗಿ, ಈ ಹಂತದಲ್ಲಿ ಸದರಿ ಪ್ರತಿವಾದಿಯನ್ನು ಪ್ರತಿಬಂಧಿಸುವುದರಿಂದ, ವಾದಿಗಿಂತ ಹೆಚ್ಚು 2 ನೇ ಪ್ರತಿವಾದಿಗೆ ಹಾನಿ ಮತ್ತು ನಷ್ಟ ಉಂಟಾಗುತ್ತದೆ.

24. ವಾದಿಯು ಹಿರಿಯ ನಾಗರಿಕನಾಗಿ ತನ್ನ ಇಳಿವಯಸ್ಸಿನಲ್ಲಿ ಶಾಂತಿಯುತವಾಗಿ ಜೀವಿಸುವ ಹಕ್ಕನ್ನು ಹೊಂದಿರುತ್ತಾರೆ ಎಂಬುದು ನಿಜ. ಆದರೆ, ಪ್ರತಿವಾದಿಗೆ ದಾವಾ ಮನೆಯಲ್ಲಿ ವಾಸಿಸುವ ಹಕ್ಕು ಇರುವುದರಿಂದ, ಸದರಿ ಪ್ರತಿವಾದಿಯ ಹಿತಾಸಕ್ತಿಯನ್ನು ಕಾಪಾಡುವುದು ಸಹ ಅಗತ್ಯವಾಗಿರುತ್ತದೆ. ವಾದಿ ಪರ ಉಲ್ಲೇಖಿಸಿರುವ ತೀರ್ಪಿನ ಸಂಗತಿಗಳು ಪ್ರಸ್ತುತ ಪ್ರಕರಣದ ಸಂಗತಿಗಳು ಬೇರೆ ಬೇರೆಯಾಗಿರುತ್ತವೆ. ಆದಕಾರಣ, ಸದರಿ ತೀರ್ಪಿನ ಲಾಭವನ್ನು ವಾದಿಯು ಪಡೆಯಲು

ಸಾಧ್ಯವಿಲ್ಲ ಎಂಬುದಾಗಿ ಅಭಿಪ್ರಾಯಪಟ್ಟು, ಈ ಹಂತದಲ್ಲಿ ಮಧ್ಯಂತರ ಅರ್ಜಿ ಸಂಖ್ಯೆ-1 ನ್ನು ಪುರಸ್ಕರಿಸಲು ತನ್ನ ಪರವಾಗಿ ಮೇಲ್ನೋಟದ ದಾವೆ ಇದೆ ಎಂಬುದನ್ನು ವಾದಿಯು ಸಾಕ್ಷಾಧಾರಗಳಿಂದ ಸಾಭೀತುಪಡಿಸಲು ಸಂಪೂರ್ಣವಾಗಿ ವಿಫಲರಾಗಿರುತ್ತಾರೆ. ಆದ್ದರಿಂದ, ಮೇಲಿನ ಅಂಶ.1 ರಿಂದ 3 ನ್ನು **ನಕಾರಾತ್ಮಕವಾಗಿ** ಉತ್ತರಿಸುತ್ತೇನೆ.

25. **ಅಂಶ-4** : ಅಂಶ 1 ರಿಂದ 3 ರಲ್ಲಿನ ಮೇಲಿನ ಚರ್ಚೆಯಿಂದ ಬಂದಂತಹ ಉತ್ತರದಿಂದ ಈ ಕೆಳಕಂಡಂತೆ,

**ಆದೇಶ**

ವಾದಿಯು ಸಿವಿಲ್ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 39 ನಿಯಮ 1 ಮತ್ತು 2, ಸಹವಾಚಕ ಕಲಂ 151 ರ ಅಡಿಯಲ್ಲಿ ಸಲ್ಲಿಸಿದ ಮಧ್ಯಂತರ ಅರ್ಜಿ ಸಂಖ್ಯೆ-1 ನ್ನು ವೆಚ್ಚಗಳ ಸಹಿತ ವಜಾಗೊಳಿಸಲಾಗಿದೆ.

(ಈ ಆದೇಶವನ್ನು ಶೀಘ್ರಲಿಪಿಗಾರರಿಂದ ನೇರವಾಗಿ ಕಂಪ್ಯೂಟರಿಗೆ ಅಳವಡಿಸುವಂತೆ ಉಕ್ತಲೇಖನ ನೀಡಿದ್ದು, ನಂತರ ನಾನು ಅದನ್ನು ಓದಿ ತಪ್ಪುಗಳನ್ನು ತಿದ್ದಿದ, ನಂತರ ಈ ದಿನ ಅಂದರೆ 19 ನೇ ಡಿಸೆಂಬರ್ 2025 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಿರುತ್ತೇನೆ)

**(ಮಾದೇಶ ಎಂ.ವಿ.,)**
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಮ್.ಎಫ್.ಸಿ., ಸಾಗರ.